

ಬರುವ ಬೆಳಕಿನಲೋಕವೆಂದರೆ ಇದೇನಾ ಅನ್ನಿಸಿತು. ಅದೆಷ್ಟೋ ದೂರ ಹೀಗಿದ್ದರೆ, ಕೆಲವೆಡೆ ಸುಟ್ಟು ಕರಕಲಾದಂತೆ ಕಪ್ಪಗೆ ಬರಲಾಗಿ ನಿಂತ ಮರಗಳು ರೇಖೆಯಾಕಾರದಲ್ಲಿ, ಅಪರೂಪದ ಭೂದೃಶ್ಯಗಳಾಗಿ ಮನಸೆಳೆದವು.

ಓಸ್ಲೋ, ಬೆರ್ಗೆನ್‌ಗಳ ದಾಟಿ 'ಗುಡ್ವಾಂಗೆನ್' ಎನ್ನುವ ಊರು ತಲುಪಿದೆವು. ಈ ಹಾದಿ ಮೇಲಿಗಿಂತ ಭಿನ್ನವಿತ್ತು. ಮುಗಿಲೆತ್ತರಕೆ ಹೊರಟಂತೆ ನಿಂತ ಪರ್ವತಸಾಲುಗಳು, ನೀಳ ನೀಳ ಸರೋವರಗಳು, ದಟ್ಟ ಹಸಿರಿನ ಕಾಡು, ಜಲಪಾತಗಳು...! ಮುಂದೆ, 'ಸೋಯೆನ್ ಫಿಯೋರ್ಡ್' ಯಾನದ ತಾಣ ಬಂದಿತು, ಫೆರ್ರಿ ಸಿದ್ಧವಿತ್ತು, ಹತ್ತಿದ್ದಾಯ್ತು.

ತುಂಬಿ ತುಳುಕುವ ನೀರಪಾತ್ರದ ಎರಡೂ ಬದಿ ದೈತ್ಯಗಾತ್ರದ ಪರ್ವತಸಾಲು ನೀರೊಳಗಿಂದ ಮೇಲೆದ್ದು ನಿಂತಿದ್ದವು ಉನ್ಮೇಷಸ್ಥಿತಿಯಲ್ಲಿ...! ಅಲ್ಲಲ್ಲಿ ಅತಿ ಸನಿಹದಲ್ಲಿ ಪರ್ವತದೆದೆಯ ಸೀಳಿ ದಬದಬನೆ ಸುರಿವ ಹಾಲಿನಂಥ ಜಲಪಾತಗಳು! ಪ್ರವಾಸಿಗರು ಕೊಡುವ ಆಹಾರಕ್ಕಾಗಿ ನೌಕೆಯ ಜೊತೆಜೊತೆಗೇ ರೆಕ್ಕೆ ಬಡಿಯುತ್ತ, ಮುದ್ದಾಗಿ ಕೊಕ್ಕು ಚಾಚುತ್ತಾ ಬರುವ ನೂರಾರು ಬೂದುಬಣ್ಣದ ಸೀಗಲ್ ಹಕ್ಕಿಗಳ ಚಂದದ ಆಟ. ಪರ್ವತದೆದೆಯ ಮೇಲೇ ಅರಳಿರುವ ಪುಟ್ಟ ಪುಟ್ಟ ಒಂದಿಷ್ಟು ಮನೆಗಳ ಮಾದಕ ಚೆಲುವು, ಕೆಲವೆಡೆ ಕಿರಿದಾದ ನೀರಹಾದಿ, ಬಳುಬಳುಕಿ ಹಾವಿನಂತೆ ಸಾಗಬೇಕಾದ ಯಾನ, ಇವುಗಳಲ್ಲಿ ಜಗವೇ ಮರೆತಂತೆ ನೀರಮೇಲೆ ತೇಲುತ್ತಿರುವಾಗಲೇ ಈ ಚಂದಕಿಂತ ಚಂದ ಎನ್ನುವ ಪುಟ್ಟ ಟೌನ್ 'ಫ್ಲಾಮ್' ತೀರದ ಮೇಲೆ ಇಳಿದಿದ್ದಾಯ್ತು.

## ಪರ್ವತಗಳಿಂದ ಸುತ್ತುವರಿದ ಊರು

ಫ್ಲಾಮ್... ಈ ಫ್ಲಾಮ್ ದೈತ್ಯ, ಮೊನಚಾದ ಪರ್ವತಗಳಿಂದ ಸುತ್ತುವರಿದ ಪುಟ್ಟ ಊರು. ಇಕ್ಕಟ್ಟಾದ ಕಣಿವೆಗಳು, ಜಲಪಾತಗಳಿಂದ ಸೌಂದರ್ಯಸಮೃದ್ಧಿಯನ್ನು ಪಡೆದ ಮೋಹಕ

'ಫ್ಲಾಮ್ ಲೈನ್' ಎಂಬ ರೈಲುಯಾನದಲ್ಲಿ ಕಾಣುವ ಹಳ್ಳಿಯ ಸೊಬಗು

